

# ದೇವರು ಒಳ್ಳೆಯ ದೇವರಾಗಿದ್ದಾನೆ

ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಅಕ್ಟೋಬರ್ 2014

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫೈಯ್ಡ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - God is a Good God!)

# ದೇವರು ಒಳ್ಳೆಯ ದೇವರಾಗಿದ್ದಾನೆ

# ವಿಷಯಸೂಚಿ


1 . ದೇವರ ಬಗ್ಗೆ ನಮ್ಮ ಚಿತ್ರಣ 1

2. ದೇವರ ಸತ್ಯ ಚಿತ್ರಣದ ಸ್ಪಷ್ಟತೆ 3

3. ದೇವರ ಬಗ್ಗೆ ಪ್ರಾಮುಖ್ಯ ಸತ್ಯಗಳು 6

4. ದೇವರು ಒಳ್ಳೆಯ ದೇವರಾಗಿದ್ದಾನೆ. 10

5. ಯೇಸುಕ್ರಿಸ್ತನು–ಕಾಣದಿರುವ ದೇವರ
ಸತ್ಯವಾದ ಪ್ರತಿನಿಧಿ 14

# 1

## ದೇವರ ಬಗ್ಗೆ ನಮ್ಮ ಚಿತ್ರಣ

ಬೇರೆಯವರು ದೇವರ ಬಗ್ಗೆ ಹೇಳಿದಂತಹ ವಿವಿಧ ಮೂಲಗಳ ಮೂಲಕವಾಗಿ ದೇವರ ಬಗ್ಗೆಗಿನ ನಮ್ಮ ಚಿತ್ರಣ ಅಭಿವೃದ್ದಿಸಲ್ಪಟ್ಟಿದೆ, ಅನುಭವಗಳ ಫಲಿಶಾಂತ, ಓದುವುದು, ವೀಕ್ಷಿಸುವುದು, ವಿಶ್ಲೇಷಣೆ ಮುಂತಾದವುಗಳಿಂದ ನಾವು ಮುಕ್ತಾಯ ಮಾಡುತ್ತೇವೆ. ಆದರೆ ಇಂತಹವುಗಳೆಲ್ಲವೂ ಸರಿಯಾದುದಲ್ಲ! ಉದಾಹರಣೆಗೆ :- ವಿಮಾಕಂಪನಿಗಳು, ಮಹಾದುರಂತವನ್ನು ಪ್ರತಿಬಿಂಬಿಸುವ, ಹವಾಮಾನದ ಪರಿಸ್ಥಿತಿ, ಭೂಕಂಪಗಳು, ಸುಂಟರಗಾಳಿ ಚಂಡಮಾರುತಗಳು, "ದೇವರ ಕ್ರಿಯೆಗಳೆಂಬುದಾಗಿ ನೋಡಿ ಹಕ್ಕು ನಿರಾಕರಣೆ ಹೇಳಿಕೆಗಳನ್ನು ಹೊಂದಿವೆ. ಇಂತಹ ವಾದಗಳಿಗೆ ನಾವುಗಳು ತೆರೆಯಲ್ಪಟ್ಟವರಾಗುವಾಗೆ, ದೇವರ ತಿಳುವಳಿಕೆಯ ಬಗ್ಗೆ ತಪ್ಪಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಪ್ರಾರಂಭಿಸುತ್ತೇವೆ. ದೇವರು ವಾಡಿಕೆಯಂತೆ, ಸುಂಟರಗಾಳಿ, ಭೂಕಂಪಗಳು ಮತ್ತು ಇತರ ಮಹಾದುರಂತಗಳಿಗೆ ಕಾರಣವಾಗಿದ್ದಾನೆ. ಎಂಬ ಕಲ್ಪನೆಯನ್ನು ನಾವು ಬೆಳೆಸಿಕೊಳ್ಳುತ್ತೇವೆ.

ನಾವುಗಳು ರಕ್ಷಿಸಲ್ಪಟ್ಟು, ದೀರ್ಘಕಾಲದ ಕ್ರೈಸ್ತರಾಗಿದ್ದಾಗೂ, ದೇವರ ಚಿತ್ರಣದ ಬಗ್ಗೆ ಅಪೂರ್ಣವಾದ ಮಾಹಿತಿ, ಅಸಮರ್ಪಕವಾದ ಮತ್ತು ತಪ್ಪಾದ ಮಾಹಿತಿಯನ್ನು ಹೊಂದಿದ್ದೆವೆ. ದೇವರ ಬಗ್ಗೆ ಸತ್ಯವಾದ ಚಿತ್ರಣವನ್ನು ನಾವು ಹೊಂದಿಲ್ಲ. ದೇವರು ಯಾರು, ಆತನು ಏನು ಮಾಡುತ್ತಾನೆ ಮತ್ತು ಆತನು ಯಾವ ಕಾರ್ಯಗಳನ್ನು ಮಾಡುತ್ತಾನೆ ಎಂಬುದರ ಬಗ್ಗೆ ನಮ್ಮ ಪೂರ್ವಗ್ರಹಗಳ ರಕ್ಷಣೆ ಉಳಿಸಿಕೊಳ್ಳುವ ಪ್ರಯತ್ನ, ತಪ್ಪು ಗ್ರಹಿಕೆಗಳು ಮತ್ತು ತಪ್ಪು ಕಲ್ಪನೆಗಳನ್ನು ನಮ್ಮ ಹಿಂದಿನ ಅನುಭವಗಳಿಗನು ಗುಣವಾಗಿ ಹೊಂದಿದ್ದೆವೆ. ಕೆಲವು ಸಮಯಗಳಲ್ಲಿ, ಧಾರ್ಮಿಕ ಪುಸ್ತಕಗಳಲ್ಲಿ ನಾವು ಕೇಳಿದಂತಹವುಗಳು ಧಾರ್ಮಿಕ ಪುಸ್ತಕಗಳಲ್ಲಿ ಓದಿದ ವಿಷಯಗಳು ನಮ್ಮನ್ನು

ದೇವರ ಬಗ್ಗೆ ತಮ್ಮ ತಪ್ಪು ಕಲ್ಪನೆಗಳನ್ನು ಫಲಿತಾಂಶವಾಗಿ ಹುಟ್ಟಿಸಿರಬಹುದು, ನಾವು ಸರಿಯಾಗಿದ್ದೆವೆ ಎಂಬುದಾಗಿ ನಾವು ಅಂದುಕೊಳ್ಳಬಹುದು, ಆದರೆ ದೇವರ ಬಗ್ಗೆ ಇರುವ ನಮ್ಮ ಚಿತ್ರಣ ತಪ್ಪಾಗಿರಬಹುದು.

# 2

# ದೇವರ ಸತ್ಯ ಚಿತ್ರಣದ ಸ್ಪಷ್ಟತೆ

**ಹೇಗೆಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೈವತ್ವವೂ ಜಗದುತ್ಪತ್ತಿ ಮೊದಲು ಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ. ಹೀಗಿರುವುದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ. ಯಾಕೆಂದರೆ ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ. ಆತನ ಉಪಕಾರಗಳನ್ನು ನೆನೆಸಿ ಆತನನ್ನು ಸ್ತುತಿಸಲಿಲ್ಲ. ಅವರು ವಿಚಾರ ಮಾಡಿ ಮಾಡಿ ಫಲ ಕಾಣಲಿಲ್ಲ. ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು. ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ಪಶು ಪಕ್ಷಿ ಸರ್ಪಾದಿಗಳ ಮೂರ್ತಿಯನ್ನು ಮಾಡಿಕೊಂಡರು.** (ರೋಮಾಪುರದವರಿಗೆ 1:20–23)

ದೇವರ ಗುಣಲಕ್ಷಣಗಳು, ಆತನ ಸೃಷ್ಟಿಯ ಮೂಲಕವಾಗಿ ನಮಗೆ ಪ್ರಕಟಿಸಲ್ಪಟ್ಟಿವೆ. ಆತನ ಕಾಣದ ಲಕ್ಷಣಗಳು, ಆತನ ನಿತ್ಯತ್ವದ ಶಕ್ತಿ ಮತ್ತು ಆತನು ದೇವರಾಗಿರುವುದು. ಆತನ ಸೃಷ್ಟಿಕಾಲದ ಮೂಲಕವಾಗಿ ಕಾಣಲ್ಪಟ್ಟಿದೆ ಮತ್ತು ಅರ್ಥವಾಗಿದೆ. ಸೃಷ್ಟಿಯು, ತನ್ನ ಸೃಷ್ಟಿಯ ಮಹಿಮೆಯನ್ನು ವರ್ಣಿಸುತ್ತದೆ. (ಕೀರ್ತನೆಗಳು 19:1–3) ಹಾಗಿದ್ದರೂ "ಸೃಷ್ಟಿಕರ್ತನ" ಬದಲಾಗಿ ಸೃಷ್ಟಿಯ ವಸ್ತುಗಳನ್ನು ಜನರು ಆರಾಧಿಸಲು ಆರಂಭಿಸಿರುವುದು ಬಹಳ ದುಖಃಕರ ಸಂಗತಿಯಾಗಿದೆ. ಆತನ ಸೃಷ್ಟಿಯ ಮೂಲಕವಾಗಿ, ಸೃಷ್ಟಿಕರ್ತನ ಬಗ್ಗೆ ತಿಳಿಯಬಹುದು, ಸೃಷ್ಟಿಯಲ್ಲಿಯೇ ದೇವರುಗಳನ್ನು ಮಾಡಿಕೊಳ್ಳದಂತೆ ನಾವು ಎಚ್ಚರಿಕೆಯಿಂದಿರಬೇಕು.

**ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಡಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ.** (2 ತಿಮೊಥೆಯನಿಗೆ 3:16)

ಸೃಷ್ಟಿಯನ್ನು ಹೊರತು ಪಡಿಸಿ, ದೇವರವಾಕ್ಯ–ಸತ್ಯವೇದ–ದೇವರ ಚಿತ್ರಣವನ್ನು ಸತ್ಯವಾಗಿ ತೆರೆದು ತೋರಿಸುವ ಸತ್ಯವೇದವನ್ನು ನಾವು

ಹೊಂದಿದ್ದೆವೆ ಯಾಕೆಂದರೆ ಸತ್ಯವೇದವು, ದೇವರು ಬರೆದಂತಹ ಪುಸ್ತಕವಾಗಿದೆ. ಧರ್ಮಗ್ರಂಥವು ದೇವರು–ವಿವರಿಸಿದ್ದು ಮತ್ತು ದೈವ ಪ್ರೇರಿತವಾದವುಗಳೆಂದು ನಮಗೆ ಗೊತ್ತು. ದೈವ ವಾಕ್ಯಗಳನ್ನು ಬರೆದಂತಹ ಬರಹಗಾರರ ಮೇಲೆ ದೇವರ ಹಸ್ತವಿದ್ದಿತ್ತು ಮತ್ತು ಸತ್ಯವೇದವು ಆತನ ಗುಣಲಕ್ಷಣಗಳು ಮತ್ತು ಗುಣಗಳನ್ನು ಮತ್ತು ಆತನು ಏನಾಗಿದ್ದಾನೆ. ಎಂಬುದರ ಬಗ್ಗೆ ದೇವರ ಸ್ವ–ಪ್ರಕಟನೆಯಾಗಿದೆ.

ಸತ್ಯವೇದದಲ್ಲಿ ದೇವರ ಅನೇಕ ಗುಣಗಳು ಮತ್ತು ಲಕ್ಷಣಗಳ ಬಗ್ಗೆ ನಾವು ಓದುತ್ತೇವೆ.

- ದೇವರು ಸ್ವ–ಅಸ್ತಿತ್ವದಲ್ಲಿರುವಾತನು – ದೇವರು, ಆತನ ಅಸ್ತಿತ್ವಕ್ಕಾಗಿ ಯಾವಾದಾದರ ಮೇಲೂ ಆತುಕೊಂಡಿರುವುದಿಲ್ಲ.
- ದೇವರು ನಿತ್ಯವಾದವರು – ಕಾಲಕ್ಕಿಂತಲೂ ಮೊದಲು ದೇವರು ಇದ್ದನು ಮತ್ತು ಆತನು ಯಾವಾಗಲೂ ಇರುವನು.
- ದೇವರು ಸೃಷ್ಟಿಕರ್ತನು ದೇವರು ಎಲ್ಲವನ್ನು ಸೃಷ್ಟಿಸಿದ್ದಾರೆ
- ದೇವರು ಎಲ್ಲಾ ಜ್ಞಾನ ಮತ್ತು ಎಲ್ಲವನ್ನು ತಿಳಿದಾತನು – ಆತನು ಸರ್ವಶಕ್ತನು.
- ಆತನು ಎಲ್ಲಾಕಡೆಯಲ್ಲೂ ಎಂದಿಗೂ ಇರುವಾತನು – ಆತನು ಸರ್ವವ್ಯಾಪಿಯಾಗಿದ್ದಾನೆ. ಆತನ ಪ್ರಸನ್ನತೆಯು ಎಲ್ಲಾ ಸಮಯ ಮತ್ತು ಎಲ್ಲಾ ಸ್ಥಳಗಳಿಗೂ ವ್ಯಾಪಿಸಿದೆ.
- ದೇವರು ವ್ಯಕ್ತಿಗತವಾಗಿ ಆತ್ಮನಾಗಿದ್ದಾನೆ–ಆತನು ಆತ್ಮನಾಗಿದ್ದಾನೆ. ಆದರೆ ಆತನು ವ್ಯಕ್ತಿಗತವಾದವನು ಆತನು ಭಾವನೆಗಳನ್ನು ಮತ್ತು ಅನುಭವಗಳನ್ನು ಹೊಂದಿದ್ದಾನೆ.
- ದೇವರು ಅಪರಿಮಿತನಾಗಿದ್ದಾನೆ–ಆತನು ಎಲ್ಲಾ ಅಳತೆಗಳಿಗಿಂತಲೂ ಮಿಗಿಲಾಗಿದ್ದಾನೆ.
- ದೇವರು ನಿರ್ವಿಕಲ್ಪವಾದವನು–ಆತನು ಬದಲಾಗದವನು. ನಾವು ವಯಸ್ಸಾಗಿ ಬೆಳೆಯುತ್ತೇವೆ ಮತ್ತು ಕೆಲವು ನಿರ್ದಿಷ್ಟ ವ್ಯಕ್ತಿತ್ವ ಚಹರೆಗಳು ಬೆಳೆಯುತ್ತವೆ,

ಅದು ಸಹ ಬದಲಾಗುತ್ತದೆ. ಆದರೆ ದೇವರು ಏಕರೀತಿಯಲ್ಲಿದ್ದಾನೆ. ಆತನು ಪ್ರೌಢನಾಗಿರುವುದು ಅವಶ್ಯವಿಲ್ಲ.

- ದೇವರು ಸಾರ್ವಭೌಮನಾಗಿದ್ದನೆ – ಆತನು ನನ್ನನ್ನು ಮತ್ತು ನಮ್ಮನ್ನು ಸಂಪರ್ಕಿಸಲು ಅವಶ್ಯವಿಲ್ಲ. ಆತನು ಯಾವುದನ್ನು ಮೆಚ್ಚುತ್ತಾನೋ ಅದನ್ನೇ ಆತನು ಮಾಡುತ್ತಾನೆ.
- ದೇವರು ಪವಿತ್ರನಾಗಿದ್ದಾನೆ
- ದೇವರು ನೀತಿವಂತನಾಗಿದ್ದಾನೆ,
- ದೇವರು ನ್ಯಾಯವುಳ್ಳವನು
- ಆತನು ಸತ್ಯವಾದ ದೇವರಾಗಿದ್ದಾನೆ.
- ಆತನು, ಪ್ರೀತಿಯ ದೇವರಾಗಿದ್ದಾನೆ.
- ಆತನು, ಒಳ್ಳೆಯತನದ ದೇವರಾಗಿದ್ದಾನೆ – ದೇವರು ಒಳ್ಳೆಯ ದೇವರಾಗಿದ್ದಾನೆ, ಮತ್ತು ಮುಂದಿನ ಅಧ್ಯಾಯಗಳಲ್ಲಿ ನಾವು ಅವುಗಳ ಕುರಿತು ನೋಡುವಂತಹ ಗುಣಲಕ್ಷಣಗಳಾಗಿವೆ.

# 3

# ದೇವರ ಬಗ್ಗೆ ಪ್ರಾಮುಖ್ಯ ಸತ್ಯಗಳು

ಇಲ್ಲಿ ದೇವರ ಬಗ್ಗೆ ಕೆಲವು ಪ್ರಮುಖ ಸತ್ಯಗಳಿವೆ.

**ದೇವರು ಯಾವಾಗಲು, ಆತನು ಏನಾಗಿದ್ದಾನೆಂಬುದರ ಜೊತೆಗೆ ಆತನ ಗುಣಲಕ್ಷಣಗಳೊಡನೆ, ಸಾಂಗತ್ಯದಲ್ಲಿದ್ದಾನೆ.**

ದೇವರು ಯಾರಾಗಿದ್ದನೆಂಬುದನ್ನು ನಾವು ತಿಳಿದುಕೊಂಡರೆ, ಆತನ ಚಿತ್ತವೇನು ಎಂಬುದನ್ನು ನಾವು ತಿಳಿದುಕೊಳ್ಳುತ್ತೇವೆ. ನಮಗಾಗಿರುವ ಆತನ ಚಿತ್ತವು, ಆತನು ಯಾರಾಗಿದ್ದಾನೆ ಅಥವಾ ಆತನ ಗುಣಲಕ್ಷಣಗಳಿಗೆ ವಿರುದ್ಧವಾಗಿರುವುದಿಲ್ಲ. ನಾವು ಕೆಲವು ಸಮಯಗಳಲ್ಲಿ, ದೇವರ ಚಿತ್ತ ಏನು ಎಂಬುದಾಗಿ ನನಗೆ ಗೊತ್ತಿಲ್ಲ ಎಂಬುದಾಗಿ ಹೇಳುವಾಗ, ಆತನು ಯಾರು ಎಂಬುದು ನಮಗೆ ಗೊತ್ತಿಲ್ಲ ಎಂಬುದಾಗಿದೆ, ಉದಾಹರಣೆಗೆ, ಪಾಪಗಳನ್ನು ಕ್ಷಮಿಸುವಂತದ್ದು ದೇವರ ಚಿತ್ತವ ಎಂಬುದನ್ನು ಗುರ್ತಿಸಲು, ನಾವು ಉಪವಾಸ ಮತ್ತು ಪ್ರಾರ್ಥನೆ ಮಾಡುವುದಿಲ್ಲ. ಕ್ಷಮಿಸುವಂತಹದು ಆತನ ಗುಣಲಕ್ಷಣ ಮತ್ತು ದೇವರು ಪಾಪಗಳನ್ನು ಕ್ಷಮಿಸುತ್ತಾನೆ, ಎಂಬುದಾಗಿ ದೇವರನ್ನು ತಿಳಿದವರಾಗಿ ಸಮೀಪಿಸುತ್ತೇವೆ. ಕಾಯಿಲೆಯಲ್ಲಿರುವ ವ್ಯಕ್ತಿಯ ವಿಷಯದಲ್ಲೂ ಸಹ ಇದೇ ಅನ್ವಯವಾಗುತ್ತದೆ, ರೋಗದಲ್ಲಿರುವ ವ್ಯಕ್ತಿಯನ್ನು ಗುಣಪಡಿಸುವುದು ದೇವರ ಚಿತ್ತವಾಗಿದೆ ಯಾಕೆಂದರೆ ಆತನು ಗುಣಪಡಿಸುವವನಾಗಿದ್ದಾನೆ. ಮತ್ತು ಆತನ ಚಿತ್ತವು ಯಾವಾಗಲೂ ಆತನ ಗುಣಲಕ್ಷಣಕ್ಕೆ ವಿರುದ್ಧವಾಗಿರುವಂತೆ ಆತನು ಮಾಡದೇ, ಆತನ ಗುಣಲಕ್ಷಣಗಳಲ್ಲಿ ಸಾಂಗತ್ಯದಲ್ಲಿದ್ದಾನೆ. ಆದುದರಿಂದ, ಪ್ರತಿಯೊಬ್ಬ ರೋಗಿಯನ್ನು ಗುಣಪಡಿಸುವುದು ಆತನ ಚಿತ್ತವಾಗಿದೆ "ನಾನು ಯೆಹೋವರಾಫ" ಎಂಬುದಾಗಿ ಆತನು ಹೇಳಿದ್ದಾನೆ. ಅಲ್ಲಿಂದ ಗುಣಪಡಿಸುವ ದೇವರಾದಾತನ ಗುಣಲಕ್ಷಣಗಳನ್ನು ಪ್ರಕಟಮಾಡಿದ್ದಾನೆ.

## ದೇವರು, ಆತನ ಸ್ವರೂಪ ಮತ್ತು ಲಕ್ಷಣದೊಡನೆ ಎಲ್ಲವನ್ನು ಸ್ನೇಹಭಾವದಿಂದ ಮಾಡುತ್ತಾನೆ

ಆದುದರಿಂದ, ಆತನು ಯಾರು ಎಂಬುದನ್ನು ನಾವು ತಿಳಿದರೆ, ಆತನು ಏನು ಮಾಡುತ್ತಾನೆಂಬುದನ್ನು ನಾವು ತಿಳಿದುಕೊಳ್ಳುತ್ತೇವೆ. ಮದುವೆಯಾಗಿರುವಂತಹವರು ಇದನ್ನು ಇನ್ನೂ ಉತ್ತಮವಾಗಿ ಅರ್ಥಮಾಡಿಕೊಳ್ಳಬಹುದು, ನನ್ನ ಹೆಂಡತಿ, ಏಮಿ, ನಾನು ಏನು ಯೋಚಿಸುತ್ತಿದ್ದೇನೆ, ನಾನು ಯಾವ ರೀತಿ ವರ್ತಿಸುತ್ತೇನೆ, ನಿರ್ದಿಷ್ಟ ಪರಿಸ್ಥಿತಿಯಲ್ಲಿ ನಾನೇನು ಮಾಡುತ್ತೇನೆಂಬುದನ್ನು ನುಡಿಯುತ್ತಾರೆ, ಅವರು ನನ್ನನ್ನು ತಿಳಿದಿದ್ದಾರೆ, ಸ್ವಲ್ಪ ಸಮಯದ ಅವಧಿಯಲ್ಲಿ ನನ್ನ ಗುಣ ನಡತೆ ಮತ್ತು ಸ್ವಭಾವಗಳ ಬಗ್ಗೆ ಆಕೆಯು ಅರ್ಥಮಾಡಿಕೊಂಡರು. ಅದೇ ರೀತಿಯಾಗಿ ದೇವರು ಯಾರೆಂಬುದು ನಮಗೆ ತಿಳಿದಿದ್ದರೆ ಆತನು ಏನು ಮಾಡುತ್ತಾನೆಂಬುದನ್ನು ನಾವು ತಿಳಿದುಕೊಳ್ಳುತ್ತೇವೆ. ಆತನು ಮಾಡುವಂತಹವುಗಳು ಆತನ, ಗುಣ ಮತ್ತು ಸ್ವಭಾವಗಳ ಸಾಂಗತ್ಯದಲ್ಲಿರುತ್ತದೆ.

ನಾವು ಹಿಂದೆ ತಿಳಿಸಿದಂತೆ ಸತ್ಯವೇದವು ನಮಗೆ ದೇವರನ್ನು ಪ್ರಕಟಿಸುತ್ತದೆ. ಆದುದರಿಂದ ದೇವರ ಗುಣ ಸ್ವಭಾವಗಳೇನು ಆತನು ಯಾರು ಎಂಬುದನ್ನು ಅರ್ಥಮಾಡಿಕೊಳ್ಳಲು ಸತ್ಯವೇದ ಓದುವುದು ನಮಗೆ ಲಾಭದಾಯಕವೇ ಆಗಿದೆ.

## ದೇವರು ತನ್ನ ಗುಣ ಮತ್ತು ಸ್ವಭಾವಗಳಿಗೆ ವಿರುದ್ಧವಾಗಿ ಅಥವಾ ಸ್ವಯಂ ವಿರೋಧಾತ್ಮಕವಾಗಿ ಏನನ್ನು ಹೇಳುವುದಿಲ್ಲ ಅಥವಾ ಮಾಡುವುದಿಲ್ಲ

"ನಾನು ಸತ್ಯವಾದ ದೇವರಾಗಿದ್ದೇನೆ ಆದರೆ ಕೆಲವು ಸಮಯಗಳಲ್ಲಿ ಸುಳ್ಳು ಹೇಳುತ್ತೇನೆ," ಎಂಬುದಾಗಿ ದೇವರು ಹೇಳುವುದಿಲ್ಲ. ಅಲ್ಲದೆ "ನಾನು ಒಳ್ಳೆಯ ದೇವರು ಆದರೆ ಕೆಲವು ಸಮಯಗಳಲ್ಲಿ ಕೆಟ್ಟ ವಿಷಯಗಳನ್ನು ಮಾಡುತ್ತೇನೆ" ಎಂಬುದಾಗಿಯು ಆತನು ಹೇಳುವುದಿಲ್ಲ. ಆದ್ದರಿಂದ ಆತನ ಸ್ವಭಾವಕ್ಕೆ ವಿರುದ್ಧವಾಗಿ, ಆತನು ಯಾವುದನ್ನು ಮಾಡುವುದಿಲ್ಲ ಇದು, ನಾವು ಕೇಳುತಿರುವಂತಹದ್ದು ದೇವರಿಂದ ಬಂದದ್ದೊ, ನಮ್ಮದೋ ಅಥವಾ

ದುಷ್ಟನದೋ ಎಂಬುದನ್ನು ಗುರ್ತಿಸಲು ಸುಲಭಕರವಾಗಿ ಮಾಡುತ್ತದೆ. ನಾನು ಕೇಳುತ್ತಿರುವಂತಹವುಗಳು, ಆತನ ಗುಣ ಮತ್ತು ಸ್ವಭಾವಗಳ ರೇಖೆಯಲ್ಲಿದ್ದರೆ ಅದು ದೇವರದು ಎಂಬುದಾಗಿ ಸರಳವಾಗಿ ನಿರ್ಧರಿಸಬಹುದು. ಇದು ಒಂದು ವೇಳೆ, ಆತನ ಸ್ವಭಾವಗಳಿಗೆ ವಿರುದ್ಧವಾಗಿದ್ದರೆ, ಆವಾಗ ಅದು ದೇವರಿಂದ ಬಂದದ್ದಲ್ಲ. ಆದ್ದರಿಂದ, ಆತನು ಯಾರು ಎಂಬುದು ನಮಗೆ ತಿಳಿದರೆ, ಆತನು ಏನು ಹೇಳುತ್ತಾನೆ ಮತ್ತು ಮಾಡುತ್ತಾನೆ ಎಂಬುದು ಅರ್ಥವಾಗುತ್ತದೆ.

**ದೇವರ ಬಲವು ಸಂಪೂರ್ಣವಾಗಿ ಮಿತಿ ಇಲ್ಲದ್ದು, ಮತ್ತು ಹೀಗಿದ್ದರೂ ದೇವರು ಮಾಡದಿರುವಂತಹ ಕೆಲವೊಂದು ವಿಷಯಗಳಿವೆ.**

ದೇವರು, ಕೆಲವೊಂದು ವಿಷಯಗಳನ್ನು ಮಾಡುವುದಿಲ್ಲವೆಂಬುದಾಗಿ ಆತನು ತಿಳಿಯಪಡಿಸಿದ್ದಾನೆ. ಉದಾಹರಣೆ:

- ದೇವರು, ತನ್ನನ್ನು ನಿರಾಕರಿಸುವುದಿಲ್ಲ (2 ತಿಮೊಥೆಯನಿಗೆ 2:13)
- ಆತನು ಸುಳ್ಳು ಹೇಳುವುದಿಲ್ಲ (ತೀತನು 1:2)
- ಆತನು ಪಾಪ ಮಾಡುವುದಿಲ್ಲ (ಯಾಕೋಬನು 1:13)

ಇಂತಹವುಗಳನ್ನು ಆತನ ಸ್ವಭಾವಕ್ಕೆ ವಿರೋದಾತ್ಮಕವಾಗಿವೆ ಎಂಬುದಾಗಿ ಆತನು ಮಾಡುವುದಿಲ್ಲ. ಆತನು ಅಪನಂಬಿಗಸ್ತ, ಸುಳ್ಳು ಹೇಳುವುದು ಅಥವಾ ಪ್ರೀತಿಸುವುದನ್ನು ಎಂದಿಗೂ ನಿಲ್ಲಿಸುವ ದೇವರಲ್ಲ.

**ದೇವರು, ಜನರಿಗೆ ಕೊಳ್ಳಂತಹ ಉಚಿತ ನೈತಿಕ ಚಿತ್ತವನ್ನು (ಸ್ವತಂತ್ರ ಆಯ್ಕೆ) ಅತಿಕ್ರಮಿಸುವುದಿಲ್ಲ**

ಆತನ ಸರ್ವಶಕ್ತತೆಯಲ್ಲಿ, ಒಳ್ಳೆಯ ಅಥವಾ ಕೆಟ್ಟದರ ಸ್ವತಂತ್ರ ಉಚಿತ ಆಯ್ಕೆ! ನಮ್ಮ ಉಚಿತ ನೈತಿಕ ಚಿತ್ತವನ್ನು ದೇವರು ಅತಿಕ್ರಮಿಸುವುದಿಲ್ಲ, ಅದಕ್ಕಾಗಿಯೇ ಆದಾಮ ಮತ್ತು ಹವ್ವಳು ಪಾಪ ಮಾಡುವುದನ್ನ ಆತನು ನಿಲ್ಲಿಸಲಿಲ್ಲ. ನಮ್ಮ ಸ್ವತಂತ್ರವಾದ ನೈತಿಕ ಚಿತ್ತದ ಮೇಲೆ ದೇವರು ಅತಿಕ್ರಮಿಸಿದರೆ, ನಾವು ಮನುಷ್ಯರಾಗಿರುತ್ತಿರಲಿಲ್ಲ ಆದರೆ ಯಾಂತ್ರಿಕ

ಮನುಷ್ಯರಾಗಿರುತ್ತಿದ್ದೆವು, ದೇವರು ಯಾಂತ್ರಿಕ ಮನುಷ್ಯರನ್ನು ಸೃಷ್ಟಿಸಲಿಲ್ಲ, ದೇವರು ತನ್ನ ಸ್ವರೂಪದಲ್ಲಿ ಸ್ವತಂತ್ರ ನೈತಿಕ ಚಿತ್ತ ಕೊಟ್ಟಂತಹ ಮನುಷ್ಯನನ್ನು ಸೃಷ್ಟಿಸಿದ್ದಾನೆ. ನಮ್ಮ ಸ್ವತಂತ್ರ ಆಯ್ಕೆ ಮತ್ತು ನಮ್ಮ ಸ್ವತಂತ್ರ ಚಿತ್ತಕ್ಕೆ ಆತನು ಅತಿಕ್ರಮಣ ಮಾಡುವುದಿಲ್ಲ. ಆತನು ಪ್ರಭಾವಿಸುತ್ತಾನೆ, ತಿದ್ದುಪಡಿಸುತ್ತಾರೆ, ಭೋದಿಸುತ್ತಾರೆ, ಮಾರ್ಗದರ್ಶಿಸುತ್ತಾರೆ, ನಮ್ಮಲ್ಲಿ ಕೆಲಸ ಮಾಡುತ್ತಾರೆ, ಆತನ ವಚನವನ್ನು ನಮಗೆ ಕೊಡುತ್ತಾರೆ ಮತ್ತು ಆತನ ಆತ್ಮನಿಂದ ನಮ್ಮನ್ನು ತುಂಬಿಸುತ್ತಾರೆ, ಆದರೆ ಆತನು ನಮಗಾಗಿ ಆಯ್ಕೆ ಮಾಡುವುದಿಲ್ಲ, ಅದಕ್ಕಾಗಿಯೇ, ಜನರು ನರಕಕ್ಕೆ ಹೋಗಲು ದೇವರು ಅವಕಾಶ ಕೊಡುತ್ತಾನೆ, ಎಲ್ಲರೂ ರಕ್ಷಿಸಲ್ಪಡಬೇಕೆಂಬುದು ಆತನ ಚಿತ್ತವಾಗಿದೆ ಆದರೆ ಜನರು ಇನ್ನೂ ನರಕಕ್ಕೆ ಹೋಗಲು ನಿರ್ಧರಿಸುತ್ತಾರೆ. ಕೆಲವು ಜನರು ಸ್ವರ್ಗಕ್ಕೆ ಹೋಗಲಿ ಮತ್ತು ಇನ್ನಿತರ ಜನರು ನರಕಕ್ಕೆ ಹೋಗಲಿ ಎಂಬುದಾಗಿ ದೇವರು ಎಂದಿಗೂ ಹೇಳಲಿಲ್ಲ. ಹೀಗೆ, ದೇವರು ನಿಯಂತ್ರಣದಲ್ಲಿ ಇದ್ದಾನೆ ಎಂಬುದಾಗಿ ಹೇಳುವಾಗ, ಸಾಮಾನ್ಯ ಪರಿಭಾಷೆಯಲ್ಲಿ ಆತನು ಇದ್ದಾನೆ. ಆದರೆ ನಿರ್ದಿಷ್ಟವಾಗಿ ಭೂಮಿಯ ಮೇಲೆ ನಾವು ಮಾಡುವಂತಹ ಆಯ್ಕೆಗಳು ಅಥವಾ ನಮ್ಮ ಸ್ವತಂತ್ರವಾದ ಚಿತ್ತದ ಮೇಲೆ ದೇವರು ನಿಯಂತ್ರಣವನ್ನು ಹೊಂದಿಲ್ಲ. ನಾವೇನಾದರೂ, ನಿಜವಾಗಿಯೂ ವಿನಾಶಕಾರಿ ಅಥವಾ ವಿವೇಚನೆಯಿಲ್ಲದ್ದನ್ನು ಮಾಡಲು ನಿರ್ದರಿಸಿದರೆ – ಅದು ನಮ್ಮ ಆಯ್ಕೆ ಆಗಿದೆ.

# 4

# ದೇವರು ಒಳ್ಳೆಯ ದೇವರಾಗಿದ್ದಾನೆ

ಅನೇಕ ವಿಷಯುಗಳ ನಡುವೆ, ದೇವರ ಬಗ್ಗೆ ಸತ್ಯವೇದವು ಪ್ರಕಟಪಡಿಸುವುದೇನೆಂದರೆ, ಇಡೀ ವಚನಗಳ ಉದ್ದಕ್ಕೂ ಪುನಃ ಪುನಃ ಸ್ಪಷ್ಟವಾಗಿ ತಿಳಿಸಲ್ಪಟ್ಟ ಸತ್ಯವೇನೆಂದರೆ – **ದೇವರು ಒಳ್ಳೆಯ ದೇವರಾಗಿದ್ದಾನೆ.**

**ಯೆಹೋವನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿ, ಆತನನ್ನು ಆಶ್ರಯಿಸಿಕೊಂಡವರು ಎಷ್ಟೋ ಧನ್ಯರು** (ಕೀರ್ತನೆಗಳು 34:8)

**ಯೆಹೋವನು ಒಳ್ಳೆಯವನು; ಆತನ ಕೃಪೆಯು ಯುಗಯುಗಕ್ಕೂ, ಆತನ ಸತ್ಯತೆಯು ತಲತಲಾಂತರಕ್ಕೂ ಇರುವವು** (ಕೀರ್ತನೆಗಳು 100:5)

**ಯೆಹೋವನಿಗೆ ಕೃತಜ್ಞತಾಸ್ತುತಿ ಮಾಡಿರಿ. ಆತನು ಒಳ್ಳೆಯವನು. ಆತನ ಕೃಪೆಯು ಶಾಶ್ವತವಾಗಿರುವದು. ಅವರು ಯೆಹೋವನ ಕೃಪೆಗೋಸ್ಕರವೂ ಆತನು ಮಾನವರಿಗಾಗಿ ನಡಿಸಿದ ಅದ್ಭುತಗಳಿಗೋಸ್ಕರವೂ ಆತನನ್ನು ಕೊಂಡಾಡಲಿ** (ಕೀರ್ತನೆಗಳು 107:1,8).

ಯಾವಾಗ ಎಲ್ಲವೂ ಅದ್ಭುತಕರವಾಗಿರುತ್ತದೊ, ಆಗ ನಾವೆಲ್ಲರೂ ದೇವರಿಗೆ ಸ್ತುತಿಯನ್ನು ಮತ್ತು ಆತನ ಒಳ್ಳೆಯತನವನ್ನು ಕೊಂಡಾಡುತ್ತ ದೇವರಿಗೆ ಕೃತಜ್ಞತಾಸ್ತುತಿಯನ್ನು ಮಾಡುತ್ತೇವೆ. ಆದಾಗ್ಯೂ ಯಾವಾಗ ವಿಷಯುಗಳು "ಅಷ್ಟೊಂದು ಅದ್ಭುತಕರವಾಗಿರದಿದ್ದರೆ" ದೇವರು ಒಳ್ಳೆಯವರಾಗಿರುವುದನ್ನು ನಿಲ್ಲಿಸಿದ್ದಾರೆ ಎಂಬುದಾಗಿ ಆಲೋಚಿಸಲು ಪ್ರಾರಂಭಿಸುತ್ತೇವೆ, ನಾವೇನಾದರು, ಒಂದು ದಿನದಲ್ಲಿ ಕೆಲವು ಗಂಟೆಗಳು ಪ್ರಾರ್ಥನೆಯನ್ನು ಪ್ರಾರಂಭದ ದಿನದಲ್ಲಿ ಮಾಡಿದರೆ, ಆ ದಿನವು ನಮಗೆ ಬಹಳ ಒಳ್ಳೆಯ ದಿನವಾಗಿರುತ್ತದೆ ಎಂಬುದಾಗಿ ನಾವು ಆಲೋಚಿಸುತ್ತೇವೆ. ಮುಂದಿನ ದಿನ ಕೆಲವು ನಿಮಿಷಗಳು ಮಾತ್ರ ಪ್ರಾರ್ಥನೆ ಮಾಡಿದರೆ, ಆತನು ನಮಗೆ ಒಳ್ಳೆಯವನಾಗಿರುವುದಿಲ್ಲ ಎಂಬುದಾಗಿ ನಾವು ಆಲೋಚಿಸಿಕೊಳ್ಳುತ್ತೇವೆ. ನಾವು ಎಷ್ಟು ಉದ್ದವಾಗಿ ಪ್ರಾರ್ಥನೆ ಮಾಡುತ್ತೇವೆ

ಎಂಬುದರ ಮೇಲೆ ದೇವರ ಒಳ್ಳೆಯತನ ಅವಲಂಬಿಸಿದೆ ಎಂಬುದಾಗಿ ಕೆಲವು ಅಂಶಗಳಲ್ಲಿ ಅಥವಾ ಇತರವಾದವುಗಳಲ್ಲಿ ತಪ್ಪಿತಸ್ಥರೆಂದು ನಾವು ಚಿಂತನೆ ಮಾಡುತ್ತೇವೆ. ಆದರೆ ದೇವರು ಒಳ್ಳೆಯವನಾಗಿದ್ದಾರೆ. ಆತನು ಏನಾಗಿದ್ದಾನೆಂಬುದರಲ್ಲಿ, ದೇವರು ಒಳ್ಳೆಯವನಾಗಿದ್ದಾನೆ ಮತ್ತು ನಾವು ಪ್ರಾರ್ಥನೆ ಮಾಡಲಿ ಅಥವಾ ಮಾಡದಿರಲಿ ಆತನು ಒಳ್ಳೆಯವವಾಗಿದ್ದಾನೆ. ನಮ್ಮಲ್ಲಿ ಕೆಲವರು, ದೇವರು ಬರೀ ಕ್ರೈಸ್ತರಿಗೆ ಮಾತ್ರ ಒಳ್ಳೆಯವನಾಗಿದ್ದಾನೆ ಎಂಬುದಾಗಿ ಆಲೋಚಿಸುತ್ತೇವೆ, ಆದರೆ ಸತ್ಯವೇದ ವಾಕ್ಯ ಹೇಳುತ್ತದೆ;

**ಯೆಹೋವನು ದಯೆಯೂ ಕನಿಕರವೂ ಉಳ್ಳವನು; ದೀರ್ಘಶಾಂತನೂ ಪ್ರೀತಿಪೂರ್ಣನೂ ಆಗಿದ್ದಾನೆ, ತಾನು ನಿರ್ಮಿಸಿದವುಗಳನೆಲ್ಲಾ ಕರುಣಿಸುವಾತನೂ ಆಗಿದ್ದಾನೆ** (ಕೀರ್ತನೆಗಳು 145:8,9)

ಕರ್ತನು, ಎಲ್ಲರಿಗೂ ಒಳ್ಳೆಯುವನಾಗಿದ್ದಾನೆ, ನಮ್ಮನ್ನು ಹಿಂಸಿಸುವವರಿಗೂ ಸಹ ಆತನು ಒಳ್ಳೆಯವನಾಗಿದ್ದಾನೆ. ಕೇವಲ ಸಭೆಗೆ ಹೋಗುವವನಿಗಲ್ಲದೆ, ಎಲ್ಲಾ ಪಾಪಿಗಳಿಗೂ ಆತನು ಒಳ್ಳೆಯವನಾಗಿದ್ದಾನೆ. ಹೀಗೆ ಮಾಡಿದರೆ,

**ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ.** (ಮತ್ತಾಯ 5:45)

ಇದಕ್ಕಾಗಿಯೇ, ತಮ್ಮ ಮೇಲೆ ಆತನ ಒಳ್ಳೆಯತನವನ್ನು ಸುರಿಸು ಎಂಬುದಾಗಿ ಇನ್ನೂ ಸಹ ದೇವರನ್ನು ಕೇಳುತ್ತಿರುವಂತಹ ಮತ್ತು ಅವ್ಯವಸ್ಥೆಯಲ್ಲಿರುವಂತಹ ಪಾಪಿಗಳಿಗಾಗಿ ನಾವು ಪ್ರಾರ್ಥನೆ ಮಾಡಬಹುದು. ಎಲ್ಲರಿಗೂ ದೇವರು ಒಳ್ಳೆಯುವನಾಗಿದ್ದಾನೆ. ದೇವರು ನಿನಗೆ ಒಳ್ಳೆಯವನಾಗಿರಬೇಕೆಂದರೆ, ಸಭೆಗೆ ಬರುವುದಕ್ಕಿಂತ ಮೊದಲು ನಿನ್ನ ಎಲ್ಲಾ ಕಾರ್ಯಗಳನ್ನು ಬಿಟ್ಟು, ಶುದ್ಧ ಮಾಡಿಕೊಂಡು, ಬಾ ಎಂಬುದಾಗಿ ಪಾಪಿಗಳಿಗೆ ಹೇಳುವ ಅವಶ್ಯವಿಲ್ಲ. ಯೆಹೋವನು ಸರ್ವೋಪಕಾರಿಯೂ ತಾನು ನಿರ್ಮಿಸಿದವುಗಳನ್ನೆಲ್ಲಾ ಕರುಣಿಸುವಾತಾನೂ ಆಗಿದ್ದಾನೆ.

(ಕೀರ್ತನೆಗಳು 145:9) ಪಾಪಿಗಳು, ತಮ್ಮ ಪಾಪಗಳು ತಮ್ಮ ಅವ್ಯವಸ್ಥೆಯೊಡನೆ ದೇವರ ಬಳಿಗೆ ಬರಲಿ ಮತ್ತು ದೇವರ ಒಳ್ಳೆಯತನ ಪಶ್ಚಾತ್ತಾಪಕ್ಕೆ ಅವನನ್ನು ನಡಿಸುತ್ತದೆ. (ರೋಮಪುರದವರಿಗೆ 2:4).

ಮತ್ತು ಏಕೆಂದರೆ ದೇವರು ಒಳ್ಳೆಯ ದೇವರಾಗಿದ್ದಾನೆ, ಆತನು ಒಳ್ಳೆಯ ಕಾರ್ಯಗಳನ್ನು ನಮಗೆ ಮಾಡಲು ಅಪೇಕ್ಷಿಸುತ್ತಾನೆ. "ನಾನು ಒಳ್ಳೆಯ ದೇವರಾಗಿದ್ದೆನೆ ಆದರೆ ನಿನಗೆ ಕೆಟ್ಟವುಗಳನ್ನು ಅಪೇಕ್ಷಿಸುತ್ತೇನೆ" ಎಂಬುದಾಗಿ ತಾನೇ ತನಗೆ ವಿರುದ್ದವಾಗಿ ಹೇಳಿಕೊಳ್ಳುವುದಿಲ್ಲ. ಆತನು ಹೇಳುವುದೇನೆಂದರೆ, ಆತನು ಮಾಡುವುದು ಮತ್ತು ಆತನ ಸಂಕಲ್ಪಗಳು ಯಾವಾಗಲೂ ಒಳ್ಳೆಯದಾಗಿರುತ್ತದೆ.

**ದೇವರು, ಒಳ್ಳೆಯ ದೇವರಾಗಿರುವುದರಿಂದ, ಆತನು ಉದಾರವಾಗಿ ಕೊಡುವಾತನಾಗಿದ್ದಾನೆ.**

**ಬೇಡಿಕೊಳ್ಳಿರಿ, ನಿಮಗೆ ದೊರೆಯುವುದು; ಹುಡುಕಿರಿ, ನಿಮಗೆ ಸಿಕ್ಕುವದು ತಟ್ಟಿರಿ; ನಿಮಗೆ ತೆರೆಯುವುದು; ಯಾಕೆಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು; ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವುದು. ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ? ಮೀನು ಕೇಳಿದರೆ ಹಾವನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ ನೀವು, ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವವನಲ್ಲವೇ** (ಮತ್ತಾಯ 7:7–11)

ಭೂಲೋಕದಲ್ಲಿ ತಂದೆಯರು, ತಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡುವರಲ್ಲವೆ, ಹಾಗಿದ್ದರೆ, ದೇವರ–ತಂದೆಯ ಹೃದಯವನ್ನು ಕಡೆಗಣಿಸದಿರಿ. ದೇವರು ಅಂತಿಮ ತಂದೆಯಾಗಿದ್ದಾನೆ. ಮತ್ತು ನಾವೂ ದುಷ್ಟರಾದರೂ, ನಮ್ಮ ಮಕ್ಕಳನ್ನು ಅಂತಹ ಪ್ರೀತಿ ಮತ್ತು ಆರೈಕೆ ಮಾಡುವವರಾಗಿ ನೋಡಿಕೊಳ್ಳುವವರಾಗಿದ್ದೇವೆ ಆದಾಗ್ಯೂ ಅಪಾರವಾಗಿ ಹೆಚ್ಚಾಗಿರುವ, ದೇವರು, ತನ್ನ ಮಕ್ಕಳಿಗೆ ಉತ್ತಮವಾದ ಒಳ್ಳೆಯ ಪದಾರ್ಥಗಳನ್ನು ಕೊಡಲು ಬಯಸುತ್ತಾನೆ ಎಂಬುದಾಗಿ ನಾನು ಖಾತರಿಪಡಿಸುತ್ತೇನೆ.

**ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲ ವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದು ಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ,** (ಯಾಕೋಬನು 1:17).

**ಯೆಹೋವ ದೇವರು ಸೂರ್ಯನೂ, ಗುರಾಣಿಯೂ ಆಗಿದ್ದಾನಲ್ಲಾ, ಯೆಹೋವನು ಕೃಪೆಯನ್ನೂ ಘನವನ್ನೂ ಅನುಗ್ರಹಿಸುವನು; ಆತನು ಸದ್ಭಕ್ತರಿಗೆ ಯಾವ ಶುಭವನ್ನು ದಯಪಾಲಿಸದೆ ಇದ್ದಾನು?** (ಕೀರ್ತನೆಗಳು 84:11)

ದೇವರು, ಒಳ್ಳೆಯ, ಮತ್ತು ಪರಿಪೂರ್ಣ ವರಗಳನ್ನು ಕೊಡುವಾತನು. ಆತನು ನಮ್ಮಿಂದ ಯಾವುದೇ ಒಳ್ಳೆಯ ವಿಷಯಗಳನ್ನು ತಡೆಹಿಡಿಯುವುದಿಲ್ಲ.

# 5

# ಯೇಸು ಕ್ರಿಸ್ತನು – ಕಾಣದಿರುವ ದೇವರ ಸತ್ಯವಾದ ಪ್ರತಿನಿಧಿ

**ಆತನು ಅದೃಶ್ಯನಾದ ದೇವರ ಪ್ರತಿರೂಪನೂ......** (ಕೊಲೊಸ್ಸೆಯವರಿಗೆ 1:15ಅ)

**......ದೇವರ ಪ್ರತಿರೂಪವಾಗಿರುವ ಕ್ರಿಸ್ತನ** (2 ಕೊರಿಂಥದವರಿಗೆ 4:4)

**ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ಪಾಪಶುದ್ಧಿಮಾಡಿದ ಮೇಲೆ ಉನ್ನತ ಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು.** (ಇಬ್ರಿಯರಿಗೆ 1:3).

ಯೇಸುವು, ದೇವರ ವ್ಯಕ್ತಿತ್ವದ, ಆತನ ಚಿತ್ತದ, ಆತನ ಮನಸ್ಸಿನ, ಮತ್ತು ಆತನ ಭಾವನೆಗಳ ಖಚಿತವಾದ ಪ್ರತಿನಿಧಿಯಾಗಿದ್ದಾನೆ. ಯೇಸು ಭೂಲೋಕದಲ್ಲಿರುವಾಗ, ಆತನು ಮಾಡಿದವುಗಳಲ್ಲಿ ಕೆಟ್ಟದ್ದನ್ನು ಮಾಡಲಿಲ್ಲ. ರೋಗಿಗಳು ಆತನ ಬಳಿಗೆ ಬರುವಾಗ ಆತನು ಮುಖ ತಿರುಗಿಸಿಕೊಳ್ಳಲಿಲ್ಲ ಆದರೆ ಅವರನ್ನು ಮುಟ್ಟಿ ಗುಣ ಮಾಡಿದನು. ಜನರ ಭೌತಿಕ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ, ಅವರಿಗೆ ಊಟಕೊಡಲು, ರೊಟ್ಟಿ ಮತು ಮೀನುಗಳನ್ನು ಅತ್ಯಧಿಕಗೊಳಿಸಿದನು. ದೇವರು ಯಾರಾಗಿದ್ದಾರೆ ಮತ್ತು ವಾಸ್ತವವಾಗಿ ದೇವರು, ಭೂಮಿಯ ಮೇಲೆ ನಮ್ಮ ಜೀವಿತಗಳಲ್ಲಿ ಆಸಕ್ತನಾಗಿದ್ದಾನೆ ಎಂಬುದನ್ನು ಆತನು ಹೀಗೆ ತೋರಿಸಿದ್ದಾನೆ.

**ಆ ಸೀಮೆಯಿಂದ ಕಾನಾನ್ಯರವಳೊಬ್ಬಳು ಹೊರಟು ಬಂದು ಸ್ವಾಮಿ, ದಾವೀದನ ಕುಮಾರನೇ, ನನ್ನನ್ನು ಕರುಣಿಸು ನನ್ನ ಮಗಳಿಗೆ ದೆವ್ವದ ಕಾಟ ಬಹಳವಾಗಿದೆ ಎಂದು ಕೂಗಿಕೊಂಡಳು** (ಮತ್ತಾಯ 15:22)

**ಆಗ ದಾರಿಯ ಮಗ್ಗುಲಲ್ಲಿ ಕೂತಿದ್ದ ಇಬ್ಬರು ಕುರುಡರು, ಯೇಸು ಈ ಮಾರ್ಗವಾಗಿ ಹೋಗುತ್ತಿದ್ದಾನೆಂದು ಕೇಳಿ ಸ್ವಾಮಿ ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಕೂಗಿಕೊಂಡರು** (ಮತ್ತಾಯ 20:30)

ಕಾನಾನ್ಯದ ಸ್ತ್ರೀ ಮತ್ತು ಇಬ್ಬರು ಕುರುಡರು, ಯೇಸುವು ತಮ್ಮ ಮೇಲೆ ಕರುಣೆ, ಅನುಕಂಪ, ಆತನ ಒಳ್ಳೆಯತನ ತೋರಿಸು ಎಂಬುದಾಗಿ ಬೇಡಿಕೊಂಡರು, ಅವರ ಅಗತ್ಯತೆಗಳು ಪೂರೈಸಲ್ಪಟ್ಟಿತ್ತು ಮತ್ತು ಸ್ವಸ್ಥವಾದರು. ಯೇಸುವು, ದೇವರು ಏನಾಗಿದ್ದಾನೆಂಬುದರ ಮತ್ತು ಕಾಣದಿರುವರ ದೇವರ ಪ್ರತಿನಿಧಿಯಾಗಿದ್ದಾನೆ. ನಾವು ಸಹ ದೇವರ ಒಳೆಯುತನಕ್ಕಾಗಿ ಬೇಡಿಕೊಳ್ಳಬಹುದು ಮತ್ತು ಪ್ರತಿದಿನ ಆತನ ಒಳ್ಳೆಯತನ ಅನುಭವಿಸ ಬಹುದಾಗಿದೆ.

**ಇವುಗಳನ್ನು ನಮ್ಮ ನೆನಪಿನಲ್ಲಿಟ್ಟುಕೊಳ್ಳಿರಿ :**

- ದೇವರು ಏನಾಗಿದ್ದಾನೆ–ಆತನ ಗುಣಗಳೊಡನೆ, ದೇವರ ಚಿತ್ತವು ಯಾವಾಗಲೂ ಸಾಂಗತ್ಯದಲ್ಲಿದೆ.

ಆದ್ದರಿಂದ, ಆತನು ಯಾರು ಎಂಬುದನ್ನು ತಿಳಿದರೆ, ಆತನ ಚಿತ್ತವೇನು ಎಂಬುದನ್ನು ನೀವು ತಿಳಿದುಕೊಳ್ಳುತ್ತೀರಿ. ದೇವರ ಚಿತ್ತವು ಕೆಲವು ವೇಳೆಗಳಲ್ಲಿ ಭಯಾನಕ ಎಂಬುದಾಗಿ ಕೆಲವು ಜನರು ಹೆದರುತ್ತಾರೆ. ಯಾವಾಗಲೂ ನಿನಗಾಗಿ ಇರುವ ಆತನ ಒಳ್ಳೆಯ ಚಿತ್ತಗಳಿಗಾಗಿ, ನಮ್ಮನ್ನು ಪರಿಪೂರ್ಣ ಸಮರ್ಪಿಸುವಂತದ್ದು ಉತ್ತಮವಾಗಿ ಜರುಗುವ ಕಾರ್ಯವಾಗಿದೆ!.

- ಆತನ ಗುಣ ಮತ್ತು ಸ್ವರೂಪಗಳೊಡನೆ ಎಲ್ಲಾ ಕಾರ್ಯಗಳನ್ನು ದೇವರು ಸ್ನೇಹಭಾವದಿಂದ ಮಾಡುತ್ತಾನೆ.

ಆದ್ದರಿಂದ ಆತನು ಯಾರು ಎಂಬುದನ್ನು ತಿಳಿದರೆ, ಆತನು ಮಾಡುವುದೇನು ಎಂಬುದು ನಿಮಗೆ ತಿಳಿಯುತ್ತದೆ. ದೇವರು ಒಳ್ಳೆಯ ವಿಷಯಗಳನ್ನು ಮಾಡುತ್ತಾನೆ ಎಂಬುದಾಗಿ ಭಯವಿಲ್ಲದೇ ಹೇಳಬಹುದು, ಖಂಡಿತವಾಗಿ ಆತನು ಎಚ್ಚರಿಸುತಾನೆ ಮತ್ತು ತಿದ್ದುಪಡಿಸುತ್ತಾನೆ. ಆದರೆ ಅವೆಲ್ಲವೂ ನಿಮ್ಮ ಒಳ್ಳೆಯದ್ದಕ್ಕಾಗಿ ಮಾಡಲ್ಪಟ್ಟಿರುತ್ತದೆ.

"ನೀನು ನರಕಕ್ಕೆ ಹೋಗುತ್ತಿ" ಎಂಬುದಾಗಿ ನಿನ್ನ ಮೇಲೆ ಪ್ರವಾಧನೆ ಅಥವಾ ಕೆಟ್ಟ ವಿಷಯಗಳನ್ನು ನಿನಗೆ ಎಂದಿಗೂ ದೇವರು ಹೇಳುವುದಿಲ್ಲ.

ಆತನು ಒಳ್ಳೆಯದನ್ನೆ ಹೇಳುತ್ತಾನೆ ಮತ್ತು ಮಾಡುತ್ತಾನೆ. ನೀವು ತಪ್ಪು ಮಾಡಿದರು ದೇವರು ತುಂಬಾ ಒಳ್ಳೆಯವರು, ನೀವು ತಪ್ಪು ತಿಳುವಳಿಕೆಯುಳ್ಳವರಾಗಿದ್ದರೂ ಆತನು ತುಂಬಾ ಜ್ಞಾನಿಯು, ನೀವು ಸುಳ್ಳು ಹೇಳಿದಾಗಲೂ, ತುಂಬಾ ಸತ್ಯವಂತನು ಮತ್ತು ನೀವು ನಿರಾಸೆಯಾದಾಗ ಬಹಳ ಬಲವುಳ್ಳವನು.

**ದೇವರು ಒಳ್ಳೆಯ ದೇವರಾಗಿದ್ದಾಗಲೂ, ಈ ಪ್ರಪಂಚದಲ್ಲಿ ಯಾಕೆ ಕೆಟ್ಟ ಸಂಗತಿಗಳು ಜರುಗುತ್ತಿದೆ.**

ಸ್ವಾಭಾವಿಕ ವಿಪತ್ತುಗಳಾದ ಪ್ರವಾಹ, ಚಂಡಮಾರುತಗಳು, ಭಯೋತ್ಪಾದಕ ಕಾರ್ಯಚಟುವಟಿಕೆಗಳು, ನಗರದಲ್ಲಿನ ಅಪರಾಧಗಳು, ಮುಂತಾದ ಇತರ ಕಾರಣಗಳ ಫಲಿತಾಂಶವಾಗಿ ಜನರು ಸಾವೀಗಿಡಾಗುತ್ತಿರುವುದನ್ನು ಪ್ರತಿದಿನ ಸುದ್ದಿ ಪತ್ರಿಕೆಗಳು ಸುದ್ಧಿತರುತ್ತವೆ. ದೇವರು ಒಳ್ಳೆಯ ದೇವರಾಗಿದ್ದರೆ, ಏಕೆ ಇಂತಹ ಕೆಟ್ಟ ಸಂಗತಿಗಳು ಜರುಗುತ್ತವೆ?

ದೇವರು ಒಳ್ಳೆಯ ದೇವರಾಗಿದ್ದಾನೆ ಆದರೆ ಭೂಮಿಯ ಮೇಲೆ ದುರಾತ್ಮನಿದ್ದಾನೆ (ಸೈತಾನ). ದುಷ್ಟನು ಪ್ರಭಾವಿಸುತ್ತಾನೆ, ಆರಂಭಿಸುತ್ತಾನೆ ಮತ್ತು ಕೆಟ್ಟದ್ದನ್ನು ಉಂಟು ಮಾಡುತ್ತಾನೆ. ದುಃಖಕರವಾಗಿ ಜನರು, ತಮಗೆ ತಿಳಿದೋ ತಿಳಿಯದೋ, ಭೂಮಿಯ ಮೇಲೆ ದುಷ್ಟನನ್ನು ಕೊಂಡ್ಯೊಯುವ ಸೈತಾನನ ಕಾರ್ಯಕರ್ತರಾಗಿರುತ್ತಾರೆ. ಆದಾಮನ ಪಾಪದಿಂದ ಸೈತಾನನು ಭೂಲೋಕದ ಮೇಲೆ ಪ್ರವೇಶ ಪಡೆದನು.

ಆದಾಮನಿಗೆ ಭೂಮಿಯು ಕೊಡಲ್ಪಟ್ಟಿತ್ತು ಮತ್ತು ದೇವರಿಗೆ ಆದಾಮನು ಅವಿಧೇಯನಾಗುವ ಮೂಲಕವಾಗಿ ಭೂಲೋಕದ ಮೇಲಿನ ನಿಯಂತ್ರಣ ಸೈತಾನನಿಗೆ ಆದಾಮನಿಂದ ರೂಪಾಂತರಿಸಲ್ಪಟ್ಟಿತ್ತು. ಹಾಗಿದ್ದರೂ, ಇದು ಬರೀ ಸೀಮಿತ ಅವಧಿಗಾಗಿಯೇ, ಅದಕ್ಕಾಗಿಯೇ ಇದೀಗ ಭೂಮಿಯ ಮೇಲೆ ಸೈತಾನನು ಕೆರಳಿದ ರೀತಿಯಲ್ಲಿ ಕಾರ್ಯ ಮಾಡುತ್ತಿರುವುದಾಗಿದೆ. (ಪ್ರಕಟಣೆ 12:12) ಸೈತಾನನು ನಿಯಂತ್ರಣ ಕಳೆದು ಕೊಳ್ಳುವ ಮತ್ತು ಅವನ ದುರಾತ್ಮಗಳು ಭೂಮಿಯ ಮೇಲಿಂದ ಹೊರಹಾಕಲ್ಪಡುವ “ಸಮಯ”

ಇದೆ. (ಮತ್ತಾಯ 8:29) ದೇವರು, ಸೈತಾನನಿಗೂ ಮತ್ತು ಅವನ ದುರಾತ್ಮಗಳಿಗೂ, ಯೋಜಿಸಿರುವುದೇನೆಂಬುದನ್ನು ಪ್ರಕಟನೆಯ ಪುಸ್ತಕವು ತೆರೆದು ತೋರಿಸುತ್ತದೆ. (ಪ್ರಕಟಣೆ 20:10,14).

**ಒಂದಾನೊಂದು ದಿನದಲ್ಲಿ ಆತನು ತನ್ನ ಶಿಷ್ಯರ ಸಂಗಡ ಒಂದು ದೋಣಿಯನ್ನು ಹತ್ತಿ ಕೆರೆಯ ಆಚೇ ದಡಕ್ಕೆ ಹೋಗೋಣ ಎಂದು ಅವರಿಗೆ ಹೇಳಲು ಅವರು ದೋಣಿಯನ್ನು ನೀರಿನೊಳಗೆ ನೂಕಿ ಹೊರಟರು. ಅವರು ಹೋಗುತ್ತಿರುವಾಗ ಆತನಿಗೆ ನಿದ್ರೆ ಹತ್ತಿತ್ತು ಅಷ್ಟರಲ್ಲಿ ಬಿರುಗಾಳಿ ಕೆರೆಯ ಮೇಲೆ ಬರಲು ದೋಣಿಯೊಳಗೆ ನೀರು ತುಂಬಿಕೊಂಡದರಿಂದ ಅವರು ಅಪಾಯುಕ್ಕೆ ಗುರಿಯಾದರು. ಹೀಗಿರಲಾಗಿ ಅವರು ಆತನ ಹತ್ತಿರ ಬಂದು ಗುರುವೇ, ಗುರುವೇ, ಸಾಯುತ್ತೇವೆ ಎಂದು ಹೇಳಿ ಆತನನ್ನು ಎಬ್ಬಿಸಿದರು. ಆಗ ಆತನು ಎದ್ದು ಗಾಳಿಯನ್ನೂ ಉಬ್ಬುವ ನೀರನ್ನೂ ಗದರಿಸಿದನು. ಗದರಿಸಲು ಅವು ನಿಂತವು, ಶಾಂತವಾಯಿತು. ತರುವಾಯ ಆತನು ನಿಮ್ಮ ನಂಬಿಕೆ ಎಲ್ಲಿ? ಎಂದು ಅವರನ್ನು ಕೇಳಿದನು. ಅವರಾದರೋ ಭಯಪಟ್ಟು ಈತನು ಯಾರಿರಬಹುದು? ಗಾಳಿಗೂ ನೀರಿಗೂ ಅಪ್ಪಣೆ ಕೊಡುತ್ತಾನೆ; ಅವು ಕೂಡ ಹೇಳಿದ ಹಾಗೆ ಕೇಳುತ್ತವಲ್ಲಾ ಎಂದು ಒಬ್ಬರಿಗೊಬ್ಬರು ಮಾತಾಡಿಕೊಂಡು ಅತ್ಯಾಶ್ಚರ್ಯಪಟ್ಟರು.** (ಲೂಕ 8:22–25).

ಯೇಸು ಮತ್ತು ಆತನ ಶಿಷ್ಯರುಗಳು ಬಿರುಗಾಳಿಯ ಮಧ್ಯದಲ್ಲಿದ್ದಾರೆ (ಲೂಕ 8:22–25) ಸ್ವಾಭಾವಿಕವಾಗಿ, ಶಿಷ್ಯರು ಮಾಡಬೇಕಾದ ಕಾರ್ಯವನ್ನು ಮಾಡಿದರು. ಯಾವಾಗ ಅದು ಕೈ ಜಾರಿತೋ ಮತ್ತು ಅವರು ಜಲಸಮಾಧಿಯಾಗುವ ಅಂತಿಮ ಹಂತಕ್ಕೆ ಬಂದಿದ್ದೇವೆ ಎಂಬುದಾಗಿ ಆಲೋಚಿಸಿಕೊಂಡಾಗ, ಅವರು ಯೇಸುವನ್ನು ಎಬ್ಬಿಸಿದರು. ಯೇಸುವು ಎದ್ದು ನಿಂತು, ಅವರು ಬಿರುಗಾಳಿಯಲ್ಲಿ ಸಿಕ್ಕಿ ಸಾಯಬೇಕೆಂಬುದು ತಂದೆಯ ಚಿತ್ತವಾಗಿದೆ ಎಂಬುದಾಗಿ ಗ್ರಹಿಸಿಕೊಂಡು ಅಂತಿಮ ಪ್ರಾರ್ಥನೆಯನ್ನು ಮಾಡಲಿಲ್ಲ. ಬದಲಾಗಿ ಆತನು ದೋಣಿಯ ಮುಂಭಾಗಕ್ಕೆ ಧೈರ್ಯವಾಗಿ ನಡೆದು ಬಂದನು ಮತ್ತು ಗಾಳಿಯನ್ನು, ಉಬ್ಬುವ ನೀರನ್ನೂ ಗದರಿಸಿದನು, ಅಲ್ಲಿ ಎಲ್ಲವು ಶಾಂತವಾಯಿತು. ನಾವು ಒಂದು ಪ್ರಶ್ನೆಯನ್ನು ಕೇಳಬೇಕು ಅಂದು ಬಿರುಗಾಳಿಯನ್ನು ಬರಮಾಡಿದ್ದು ಯಾರು? ದೇವರ ಅಥವಾ ಸೈತಾನನ ಅಥವಾ ಪ್ರಕೃತಿಯ ಕೆಲಸವೆ?

ಇದು ದೇವರ ಕಾರ್ಯಗಳಾಗಿರಲಿಲ್ಲ ಯಾಕೆಂದರೆ ಯೇಸುವು ತಂದೆಯ ಚಿತ್ತಕ್ಕೆ ವಿರುದ್ದವಾಗಿ ಹೋರಾಟ ಮಾಡಬೇಕಾಗಿರುತ್ತಿತ್ತು. ಆದ್ದರಿಂದ ಇದು ಒಂದು ಸೈತಾನನ ಕಾರ್ಯವಾಗಿರಬಹುದು ಅಥವಾ ಪ್ರಕೃತಿಯು ಬಿರುಗಾಳಿಯನ್ನುಂಟು ಮಾಡಿರಬಹುದು. ದೇವರು ಚಲನೆಯಲ್ಲಿ ಕೆಲವು ನಿರ್ದಿಷ್ಟ ಕಾನೂನುಗಳನ್ನು ಇಟ್ಟಿದ್ದಾನೆ. ಗಾಳಿಗೆ ಮೇಲೆಸೆದ ಸೇಬಿನ ಹಣ್ಣು ತಿರುಗಿ ಭೂಮಿಗೆ ಬಂದು ಬೀಳುತ್ತದೆ, ಯಾಕೆಂದರೆ ದೇವರು ಅದನ್ನು ಭೂಮಿಗೆ ತಿರುಗಿ ಬೀಳುವಂತೆ ತಳ್ಳುತ್ತಿದ್ದಾನೆ ಎಂಬುದಾಗಿ ಅಲ್ಲ. ಆದರೆ ಯಾಕೆಂದರೆ ಗುರುತ್ವಾರ್ಕಷಣೆಯಿಂದ ಮಾತ್ರ ಅದು ಬೀಳುತ್ತದೆ. ಪ್ರಕೃತಿಯು ಕಾರ್ಯನಿರತವಾಗಿರಲು ಆತನು ಕೆಲವು ಕ್ರಮಗಳನ್ನು ಇಟ್ಟಿದ್ದಾನೆ. ಆದರೆ ಸೈತಾನನು ನೈಸರ್ಗಿಕ ಅಂಶಗಳಲ್ಲಿ ಕಾರ್ಯ ಮಾಡುತ್ತಾನೆ. ಯೋಬನ ಪುಸ್ತಕ ಅಧ್ಯಾಯ 1 ಮತ್ತು 2 ರಲ್ಲಿ ನಾವು ಓದುತ್ತೇವೆ–ಸೈತಾನನು ಕರ್ತನ ಪ್ರಸನ್ನತೆಯಿಂದ ಹೊರನಡೆದು ಯೋಬನ ಕುಟುಂಬ ಮತ್ತು ಸಂಬಂಧಪಟ್ಟವುಗಳನ್ನು ನಾಶಮಾಡಲು ನಿರ್ದಿಷ್ಟ ವಿಪತ್ತುಗಳನ್ನು ತಂದು ಹಾಕಿದನು ಎಂಬುದಾಗಿ ನೋಡುತ್ತೇವೆ. ವಿಪತ್ತುಗಳು ಜರುಗಿದರೆ ದೇವರನ್ನು ದೂಷಿಸಬೇಡಿರಿ, ಯಾಕೆಂದರೆ ಆತನು ಎಲ್ಲಾ ಸಮಯದಲ್ಲೂ ಒಳ್ಳೆಯವನಾಗಿದ್ದಾನೆ. ಇಂತಹ ವಿಪತ್ತುಗಳು ದುಷ್ಟನಿಂದ ಉಂಟಾಗಿರಬಹುದು ಅಥವಾ ಪ್ರಕೃತಿಯ ಕ್ರಮವಾದ ಕಾರ್ಯಗಳಾಗಿರಬಹುದು.

ದೇವರು ಒಂದು ದಿನ ಒಳ್ಳೆಯವನಾಗಿದ್ದು ಇನ್ನೊಂದು ದಿನ ಕೆಟ್ಟವನಾಗಿರುವುದಿಲ್ಲ. ಆತನು ಎಲ್ಲಾ ಸಮಯದಲ್ಲೂ ಒಳ್ಳೆಯವನಾಗಿದ್ದಾನೆ.

ಯೇಸುವು ಬಿರುಗಾಳಿಯನ್ನು ಗದರಿಸಿದಾಗ, ಆತನು ಹಿಂತುರಿಗಿ ನೋಡಿ ಆತನ ಶಿಷ್ಯರಿಗೆ, ನೀವು ಯಾಕೆ ಈ ದಿನ ಸಭೆಗೆ ಹೋಗಲಿಲ್ಲ ಎಂಬುದಾಗಿ ಕೇಳಲಿಲ್ಲ. ಆತನು ಕಾರ್ಯ ಮಾಡಿದಾಗ ಕೇಳಿದ್ದೇನೆಂದರೆ ನಿಮ್ಮ ನಂಬಿಕೆ ಎಲ್ಲಿ? ಅಂತಹ ಕೆರಳಿದ ಬಿರುಗಾಳಿಯನ್ನು, ಶಿಷ್ಯರು, ತಮ್ಮ ನಂಬಿಕೆಯ ಅಧಿಕಾರವನ್ನು ತೆಗೆದುಕೊಂಡು ಎದ್ದು ನಿಂತು ಶಾಂತಪಡಿಸಬಹುದಿತ್ತು ಎಂಬುದಾಗಿ ಆತನಿಗೆ ಗೊತ್ತಿತ್ತು. ಅದೇ ರೀತಿಯಾಗಿ ನಮ್ಮಲ್ಲಿ ಅನೇಕರು ತಮ್ಮ ಜೀವಿತಗಳಲ್ಲಿ ಇಂತಹ ಬಿರುಗಾಳಿಯನ್ನು ಹಾದು

ಹೋಗುತ್ತಿರುವಾಗ, ಅವರಿಗಾಗಿ ದೇವರನ್ನು ದೂಷಿಸುತ್ತಿರಬಹುದು. ದೇವರನ್ನು ದೂಷಿಸುವುದನ್ನು ನಿಲ್ಲಿಸಿರಿ! ನಮ್ಮ ಒಳ್ಳೆಯ ದೇವರ ಮೇಲಿನ ನಂಬಿಕೆಯಿಂದ ಅವುಗಳನ್ನು ಕೆಳಗೆ ತರುತ್ತೇವೆ ಎಂಬುದಾಗಿ, ಅವುಗಳ ಮೇಲೆ ಅಧಿಕಾರತೆಗೆದುಕೊಂಡು, ಎದ್ದುನಿಂತು ಹೇಳೋಣ.

ನಮ್ಮ ಜೀವಿತಗಳು ಮುಳುಗಲು ಬಿರುಗಾಳಿಯನ್ನು ನಮ್ಮ ಒಳ್ಳೆಯ ದೇವರು ಬರಮಾಡುವುದಿಲ್ಲ. ಸ್ವಲ್ಪ ನಿಗದಿತ ಸಮಯದಲ್ಲಿ ದುಷ್ಟನು ಭೂಮಿಯ ಮೇಲೆ ಕಾರ್ಯಮಾಡಲಿ ಎಂಬುದಾಗಿ ದೇವರು ಅವಕಾಶ ನೀಡಿದ್ದಾನೆ. ಆದರೆ ಆತನು ನಮ್ಮನ್ನು ತೊರೆದು ಅಸಹಾಯಕರಾಗಿ ಬಿಟ್ಟು ಬಿಟ್ಟಿಲ್ಲ. ಆತನು ನಮಗೆ ನಂಬಿಕೆ ಕೊಟ್ಟಿದ್ದಾನೆ. ಹಾಕಿಕೊಳ್ಳಲು ರಕ್ಷಾಕವಚ ಕೊಟ್ಟಿದ್ದಾನೆ ಮತ್ತು ಹೊರಬಂದಂತಹ ಜಯದ ಕ್ರಿಸ್ತೀಯ ಜೀವಿತವನ್ನು ಜೀವಿಸುವಂತೆ ಮಾಡುವ ಆತನ ವಾಕ್ಯಗಳನ್ನು ಕೊಟ್ಟಿದ್ದಾನೆ.

ದೇವರು ನ್ಯಾಯವುಳ್ಳ ದೇವರಾಗಿರುವುದರಿಂದ, ನ್ಯಾಯ ಮತ್ತು ನ್ಯಾಯತೀರ್ಪು ಎಂಬ ಪರಿಕಲ್ಪನೆ ಇದೆ. ಆದರೆ ನಾವು ದೇವರ ಕಾನೂನನ್ನು ಭಂಗಪಡಿಸಿ ಮತ್ತು ಆತನ ಗಡಿ ಮೀರಿ ಹೊರಗೆ ನಡೆದ ಸಮಯಗಳು ಉಂಟು.

ಆತನು ಏನಾಗಿದ್ದಾನೆಂಬುದರ ಪರಿಪೂರ್ಣ ಅನುಭವ (ಆತನ ಪರಿಪೂರ್ಣತೆಯನ್ನು ಪಡೆಯಬೇಕೆಂಬುದಾಗಿ ಆತನು ಅಪೇಕ್ಷಿಸುತ್ತಾನೆ), ಆತನು ಏನಾಗಿದ್ದಾನೆಂಬುದರ ದೃಢೀಕರಣದಲ್ಲಿ ನಾವು ಜೀವಿಸಬೇಕು (ಆತನು ಪರಿಶುದ್ಧನು, ಆದ್ದರಿಂದ ನಾವು ಸಹ ಒಬ್ಬರಿಗೊಬ್ಬರು ಒಳ್ಳೆಯವರಾಗಿರಬೇಕು, ನಮ್ಮ ಜೀವನ ಶೈಲಿ ಮತ್ತು ನಡವಳಿಕೆ ನಮ್ಮ ಒಳ್ಳೆಯ ದೇವರ ನೀತಿಯಲ್ಲಿರಬೇಕು), ಆತನು ಏನಾಗಿದ್ದಾನೆಂಬುದರಲ್ಲಿ ಆತನನ್ನು ನಾವು ಆರಾಧಿಸಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ (ಆತನು ಯಾರಾಗಿದ್ದಾನೆಂಬುದಾಗಿ ಆತನಿಗೆ ಸ್ತೋತ್ರ ಮತ್ತು ಕೃತಜ್ಞತೆ ಸಲ್ಲಿಸಿರಿ). "ಮತ್ತು ಆತನ ಪರಿಪೂರ್ಣತೆಯಲ್ಲಿ ನಾವು ಕೃಪೆಯಿಂದ ಕೃಪೆಯನ್ನು ಪಡೆದುಕೊಂಡಿದ್ದೇವೆ" (ಯೋಹಾನನು 1:16).

ನಮ್ಮ ಜೀವಿತಗಳಲ್ಲಿ ದೇವರ ಒಳ್ಳೆಯತನವನ್ನು ಅನುಭವಿಸಬಹುದಾಗಿದೆ. "ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ಶುಭವೂ ಕೃಪೆಯೂ ನನ್ನನ್ನು ಹಿಂಬಾಲಿಸುವವು" (ಕೀರ್ತನೆಗಳು 23:6 ಅ).

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

### ಉಚಿತ ಇ-ಪುಸ್ತಕಗಳು

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

### ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್‌ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

''**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು**'' (ಅಪೊಸ್ತಲರ ಕೃತ್ಯ 10:43)

''**ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ**'' (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೋ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಬೇರೆಯವರು ದೇವರ ಬಗ್ಗೆ ಹೇಳಿದಂತಹ ವಿವಿಧ ಮೂಲಗಳ ಮೂಲಕವಾಗಿ ದೇವರ ಬಗ್ಗೆಗಿನ ನಮ್ಮ ಚಿತ್ರಣ ಅಭಿವೃದ್ಧಿಸಲ್ಪಟ್ಟಿದೆ, ಅನುಭವಗಳ ಫಲಿಶಾಂತ, ಓದುವುದು, ವೀಕ್ಷಿಸುವುದು, ವಿಶ್ಲೇಷಣೆ ಮುಂತಾದವುಗಳಿಂದ ನಾವು ಮುಕ್ತಾಯ ಮಾಡುತ್ತೇವೆ. ಆದರೆ ಇಂತಹವುಗಳೆಲ್ಲವೂ ಸರಿಯಾದುದಲ್ಲ!

ದೇವರು ಯಾರು, ಆತನು ಏನು ಮಾಡುತ್ತಾನೆ ಮತ್ತು ಆತನು ಯಾವ ಕಾರ್ಯಗಳನ್ನು ಮಾಡುತ್ತಾನೆ ಎಂಬುದರ ಬಗ್ಗೆ ನಮ್ಮ ಪೂರ್ವಗ್ರಹಗಳ ರಕ್ಷಣೆ ಉಳಿಸಿಕೊಳ್ಳುವ ಪ್ರಯತ್ನ, ತಪ್ಪು ಗ್ರಹಿಕೆಗಳು ಮತ್ತು ತಪ್ಪು ಕಲ್ಪನೆಗಳನ್ನು ನಮ್ಮ ಹಿಂದಿನ ಅನುಭವಗಳಿಗನು ಗುಣವಾಗಿ ಹೊಂದಿದ್ದೆವೆ. ಕೆಲವು ಸಮಯಗಳಲ್ಲಿ, ಧಾರ್ಮಿಕ ಪುಸ್ತಕಗಳಲ್ಲಿ ನಾವು ಕೇಳಿದಂತಹವುಗಳು ಧಾರ್ಮಿಕ ಪುಸ್ತಕಗಳಲ್ಲಿ ಓದಿದ ವಿಷಯಗಳು ನಮ್ಮನ್ನು ದೇವರ ಬಗ್ಗೆ ತಮ್ಮ ತಪ್ಪು ಕಲ್ಪನೆಗಳನ್ನು ಫಲಿತಾಂಶವಾಗಿ ಹುಟ್ಟಿಸಿರಬಹುದು. ಸಾಮಾನ್ಯವಾಗಿ ನಾವೂ ಕೂಡಾ ಆಗಾಗ್ಗೆ ದೇವರು ಸರಾಸರಿಯಾದವರು ಮತ್ತು ಕ್ರೂರಿ ಎಂಬುದಾಗಿ ಭಾವಿಸುತ್ತೇವೆ.

ಈ ಪುಸ್ತಕವು ಸತ್ಯವೇದದಿಂದ ದೇವರು ಒಳ್ಳೆಯ ದೇವರಾಗಿದ್ದಾನೆ ಎಂಬುದರ ಬಗ್ಗೆ ದೇವರ ಚಿತ್ರಣವನ್ನು ಬಿಂಬಿಸುತ್ತದೆ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org